ಸದರಿ ಕಾಯ್ದೆಗಳಡಿಯಲ್ಲಿ ಬೀಜ ಪರಿವೀಕ್ಷಕರು ಬೀಜ ಮಾರಾಟ ಮಳಿಗೆಗಳಿಂದ ಬೀಜ ಮಾದರಿಗಳನ್ನು ಸಂಗ್ರಹಿಸಿ, ಬೀಜ ಪರೀಕ್ಷಾ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಿ ಬೀಜಗಳ ಗುಣಮಟ್ಟ ಖಾತರಿಪಡಿಸಿಕೊಳ್ಳಲಾಗುವುದು.

ರೈತರುಗಳಿಗೆ ನೀಡಿದ ಕೃಷಿ ಸಾಲ

1662 (2223) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) - ಮಾನ್ಯ ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) 1999-2000ನೇ ಇಸವಿಯಿಂದ ಇದುವರೆಗೆ ನೀಡಲಾದ ಕೃಷಿ ಸಾಲದ ಮೊತ್ತ ಎಷ್ಟು;

ಆ) ಕಳೆದ ಮೂರು ವರ್ಷಗಳಲ್ಲಿ ರೈತರಿಗೆ ನೀಡಿದ ಸಾಲ ಹಾಗೂ ಬಡ್ಡಿ ಮನ್ನಾಗಳ ಮೊತ್ತ ಎಷ್ಟು ;

ಇ) ಬರಪೀಡಿತ ರೈತ ಸಮುದಾಯಕ್ಕೆ ಸರಕಾರದವರು ನೀಡಿದ ವಿವಿಧ ಪರಿಹಾರಗಳ ವಿವರಗಳೇನು ?

ಶ್ರೀ ಎಚ್. ವಿಶ್ವನಾಥ್ (ಸಹಕಾರ ಸಚಿವರು):

ಅ) 1999-2000ನೇ ಇಸವಿಯಿಂದ ಇದುವರೆಗೆ ನೀಡಲಾದ ಕೃಷಿ ಸಾಲದ ಒಟ್ಟು ಮೊತ್ತ ರೂ. 4250.75 ಕೋಟಿಗಳು, ವಿವರ ಈ ಕೆಳಕಂಡಂತೆ ಇರುತ್ತದೆ.

(ರೂ. ಕೋಟಿಗಳಲ್ಲಿ)

	ST/MT	LT
1999-2000	990.15	136.43
2000-2001	1150.98	122.37
2001-2002	1384.44	103.16
2002-2003	725.18	73.12

(ಡಿಸೆಂಬರ್ 2002 ರವರೆಗೆ)

ಆ) ಕಳೆದ ಮೂರು ವರ್ಷಗಳಲ್ಲಿ ರೈತರಿಗೆ ನೀಡಿದ ಸಾಲದ ಮೊತ್ತ ರೂ. 3887.44 ಕೋಟಿ ಹಾಗೂ ಕಳೆದ ಮೂರು ವರ್ಷಗಳಲ್ಲಿ ಬಡ್ಡಿ ಮನ್ನಾದ ಯೋಜನೆ ಜಾರಿಯಲ್ಲಿ ಇರುವುದಿಲ್ಲ.

ಇ) 2002 ನೇ ಮುಂಗಾರು ಅವಧಿಯಲ್ಲಿ ವಿತರಿಸಲಾಗಿರುವ ಎಲ್ಲಾ ಅಲ್ಪಾವಧಿ ಬೆಳೆ ಸಾಲಗಳ ಮೇಲಿನ ಬಡ್ಡಿ ಮನ್ನಾ ಮಾಡಲಾಗಿದೆ.

ಬೆಂಗಳೂರು ನಗರದಲ್ಲಿ ಪಡಿತರ ಚೀಟಿಗಳು

1663 (1811) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) - ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಬಡತನದ ರೇಖೆಗಿಂತ ಕೆಳಗಿರುವವರಿಗೆ ಪಡಿತರ ಚೀಟಿಗಳನ್ನು ನೀಡಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ವಿತರಿಸಲಾಗಿದೆ ;

ಆ) ಇವರಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸಲಾಗುವುದೇ ;

ಇ) ಸರಾಸರಿ ಪ್ರತಿ ತಿಂಗಳು ಬೇಕಾಗುವ ಅಕ್ಕಿ, ಗೋಧಿ, ಸೀಮೆ ಎಣ್ಣೆ ಪ್ರಮಾಣವೆಷ್ಟು ; ಇದಕ್ಕಾಗಿ ಸರ್ಕಾರಕ್ಕೆ ಬೀಳತಕ್ಕ ಹೊರೆ ಎಷ್ಟು ;